# ವಾಟ್ಸಾಪ್ ಗುಂಪುಗಾರಿಕೆ

■ ಗೀತಾ ಕುಂದಾಪುರ
ಕಲೆ: ಸಂತೋಷ್ ಸಸಿಹಿತ್ಲು



ಬೆಳ್ಳಂಬೆಳಿಗ್ಗೆ 'ಟಪ್ ಟಪ್' ಎನ್ನುವ ಶಬ್ದ ಕೇಳಿ ಪಕ್ಕನೆ ಎಚ್ಚರವಾಯಿತು. ನೋಡಿದರೆ ಗಂಟೆ ಇನ್ನೂ 6. ನನ್ನ ಅಲಾರಂ ಹೊಡೆಯುವುದು 7 ಗಂಟೆಗೆ. ಶಬ್ದದ ಮೂಲ ಹುಡುಕಿದರೆ ನಿನ್ನೆ ರಾತ್ರಿ ಶುರುವಾದ ಹೊಸ ಮೂರು ವಾಟ್ಸಾಪ್ ಗ್ರೂಪುಗಳಲ್ಲಿನ ಮೆಸೇಜುಗಳ ಹಾರಾಟದ ಸದ್ದಾಗಿತ್ತದು. ನಾನು ವಾಟ್ಸಾಪ್ ಗ್ರೂಪ್‌ಗಳನ್ನು ಮೂಕವಾಗಿಸುವುದರಿಂದ (ಮ್ಯೂಟ್) ಮೆಸೇಜುಗಳ ಹಾರಾಟದ ಶಬ್ದ ಕೇಳಿಸುವುದಿಲ್ಲ. ಆದರಿದು ಹೊಸ ಗ್ರೂಪ್, ಇನ್ನೂ ಅವುಗಳ ಬಾಯನ್ನು ಮುಚ್ಚಿರಲಿಲ್ಲ.

ಹೊಸ ಗ್ರೂಪುಗಳತ್ತ ಕಣ್ಣಾಡಿಸಿದೆ. ಒಂದು 'ಅಕ್ಕಮ್ಮ ಡೈಡ್ ಗ್ರೂಪ್'. ಅಕ್ಕಮ್ಮ ದೂರದ ಸಂಬಂಧಿ, ಸಾಕಷ್ಟು ಜನರಿಗೆ ಬೇಕಾದವರಾಗಿದ್ದರು, ಸ್ವಲ್ಪ ದಿನಗಳಿಂದ ಪ್ಯಾರಲಿಸಿಸ್ ಆಗಿ ಹಾಸಿಗೆ ಹಿಡಿದಿದ್ದು ತಿಳಿದಿತ್ತು. ಮೆಸೇಜ್ ಓದಿದಾಗ ಅವರು ನಿನ್ನೆ ಸಾಯಂಕಾಲ ತೀರಿಕೊಂಡರೆಂದು, ಈ ವಿಷಯವನ್ನು ಎಲ್ಲರಿಗೂ ತಿಳಿಸಲು ಈ ಗ್ರೂಪ್ ಶುರು ಮಾಡಿದ್ದೆಂಬ ವಿಷಯ ತಿಳಿಯಿತು. ಮುಂದಿನ ದಿನಗಳಲ್ಲಿ ಅವರ ಮುಂದಿನ ಕಾರ್ಯದ ಬಗ್ಗೆ ಹೇಳುವುದಲ್ಲದೆ, ಫೋಟೊಗಳನ್ನು ಹಂಚಿಕೊಳ್ಳುತ್ತಾರಂತೆ ಈ ಗ್ರೂಪ್‌ನಲ್ಲಿ. ಮತ್ತೊಂದು 'ಹೊಟ್ಟೆನೋವು ಗ್ರೂಪ್'. ಸ್ನೇಹಿತೆಯೊಬ್ಬಳಿಗೆ ರಾತ್ರಿ ಹೊಟ್ಟೆನೋವು ಶುರುವಾಯಿತು, ಇದಕ್ಕೆ ಯಾವ ಮನೆ ಮದ್ದು ಇದೆ ಎಂದು ನಾಲ್ಕಾರು ಸ್ನೇಹಿತೆಯರಿಂದ ತಿಳಿದುಕೊಳ್ಳಲು ಈ ಗ್ರೂಪ್ ಶುರು ಮಾಡಿದಳಂತೆ. ಮೂರನೆಯದು, 'ಸೀಕ್ರೆಟ್ 30–06–22'. ಗೆಳತಿಯೋರ್ವಳ ಮನೆಯ ಗೃಹಪ್ರವೇಶವಿದ್ದು, ಎಲ್ಲರೂ ಸೇರಿ ಗಿಫ್ಟ್ ಕೊಡುವುದೆಂದೂ ಅದಕ್ಕಾಗಿ ಯಾವ ಗಿಫ್ಟ್ ಕೊಡಬಹುದು, ಎಷ್ಟು ಹಣದ್ದು ಎಂದು ಚರ್ಚಿಸಲು ಈ ಗ್ರೂಪ್ ಶುರು ಮಾಡಿದ್ದು, ವಿಷಯ ಗುಟ್ಟಾಗಿ ಇಡುವುದಕ್ಕಾಗಿ ಆ ಹೆಸರು ಕೊಟ್ಟಿದ್ದಂತೆ. ಇಂತಹ ಗ್ರೂಪುಗಳು ಸಿಲ್ಲಿ, ಟೈಮ್ ವೇಸ್ಟ್ ಎನಿಸಿದರೂ ಎಲ್ಲರಿಗೂ ಫೋನ್ ಮಾಡಿ ಹೇಳುವುದಕ್ಕಿಂತ/ಕೇಳುವುದಕ್ಕಿಂತ ಇದು ಒಳ್ಳೆಯದಲ್ಲವೇ? ಮುಂದುವರಿಯುತ್ತಿರುವ ಟೆಕ್ನಾಲಜಿ ಖಂಡಿತವಾಗಿಯೂ ಮನುಷ್ಯನ ಜೀವನವನ್ನು ಸುಲಭವಾಗಿಸುತ್ತದೆ, ಅದನ್ನು ಉಪಯೋಗಿಸಲು ಗೊತ್ತಿರಬೇಕಷ್ಟೇ.

ಎಷ್ಟು ಹೊತ್ತಿಗೆ ಬೇಕಾದರೂ, ಎಲ್ಲಿಗೆ ಬೇಕಾದರೂ, ಯಾರೊಂದಿಗಾದರೂ ಮಾತನಾಡಿ ಮನ ಹಗುರಾಗಿಸಿಕೊಳ್ಳಬಹುದಾದ ಮೊಬೈಲ್ ಆವಿಷ್ಕಾರವೇ ಗ್ರೇಟ್ ಎನಿಸಿದರೆ, ಈ ವಾಟ್ಸಾಪ್